International Journal of Kannada Research
www.kannadajournal.com

ISSN: 2454–5813
IJKR 2023; 9(3): 176-180
© 2023 IJKR
www.kannadajournal.com
Received: 01-07-2023
Accepted: 05-08-2023

**ಜಯಶೀಲ ಎಂ.ಎನ್**
ಸಹಾಯಕ ಪ್ರಾಧ್ಯಾಪಕರು, ಎಖಖ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ನಂಜನಗೂಡು, ಕರ್ನಾಟಕ, ಭಾರತ

**Corresponding Author:**
**ಜಯಶೀಲ ಎಂ.ಎನ್**
ಸಹಾಯಕ ಪ್ರಾಧ್ಯಾಪಕರು, ಎಖಖ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ನಂಜನಗೂಡು, ಕರ್ನಾಟಕ, ಭಾರತ

# ಕೆ.ವಿ. ತಿರುಮಲೇಶ್ ನಿರೂಪಸಿದ ಅಸ್ತಿತ್ವವಾದದ ನೆಲೆಗಳು

**ಜಯಶೀಲ ಎಂ.ಎನ್ ~**

## ಪೀಠಿಕೆ

‘ಅಸ್ತಿತ್ವ’ ಎನ್ನುವುದು ಇಂಗ್ಲೀಷಿನ ಇಥುಣಜಟಿಛಿಜ ಎಂಬ ಪದದ ಕನ್ನಡ ಅನುವಾದ.ಇಥುಣಜಟಿಛಿಜ ಎಂಬ ಪದ ಇಥುಣಇರು/ಅಸ್ತಿತ್ವಕ್ಕೆ ಬರು ಎಂಬ ಕ್ರಿಯಾಪದದ ಅಮೂರ್ತ ನಾಮರೂಪ ಹಾಗೂ ಇವುಗಳ ಹಿಂದೆ ಇರುವುದು ಎಕ್ಸಿಸ್ಟರ್ ಲ್ಯಾಟಿನ್ ಸಂಯುಕ್ತ ಪದ.ಮನುಷ್ಯ ದೈಹಿಕವಾಗಿ ಬೆಳೆಯುತ್ತಾನೆ. ಅದರ ಮೇಲೆ ಅವನಿಗೆ ಸ್ವಾತಂತ್ರ್ಯವಿಲ್ಲ. ಮನುಷ್ಯನ ಇನ್ನೊಂದು ರೀತಿಯ ಬೆಳವಣಿಗೆ ಅವನ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದುದಾಗಿದೆ.ಅದು ಅವನು ಮಾಡುವ ಆಯ್ಕೆಗಳ ಮೇಲೆ ನಿರ್ದರಿತವಾಗಿರುತ್ತದೆ.ಮನುಷ್ಯನಿಗೆ ಪ್ರತಿಯೊಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶದ ಜೊತೆಗೆಅದರ ಹೊಣೆಗಾರಿಕೆಯ ಜವ್ದಾರಿಯು ಇರುತ್ತದೆ.ಇದರಿಂದ ಅವನು ಮಾಡುವ ಆಯ್ಕೆಯಿಂದ ಸಂತೋಷ ಸಿಗಬಹುದು, ಸಂಕಟ ಆಗಬಹುದು.ಆದರೆ ಆಯ್ಕೆಸ್ವಾತಂತ್ರ್ಯದ ಜೊತೆಗೆ ಜವ್ದಾರಿಯ ಹೊಣೆಗಾರಿಕೆ ಬಿಡುಗಡೆಯೂ ಇಲ್ಲ.

19 ನೇ ಶತಮಾನದ ಆರಂಭದ ದಾರ್ಶನಿಕನಾದ ಸೋರೆನ್ ಕಿರ್ಕೆಗಾರ್ಡ್ ಎಂಬಾತನನ್ನು ಅಸ್ತಿತ್ವವಾದದ ಜನಕ ಎಂಬುದಾಗಿ ಅವನ ಮರಣಾನಂತರದಲ್ಲಿ ಪರಿಗಣಿಸಲಾಗಿದೆ. ಈತನ ವಾದದ ಪ್ರಕಾರ “ವ್ಯಕ್ತಿಯು ತನ್ನ ಜೀವನಕ್ಕೆ ಅರ್ಥವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಹತಾಶೆ, ತಲ್ಲಣ, ಅಸಂಬದ್ಧತೆ, ಬುದ್ಧಿವಿಕಲ್ಪ, ಬೇಸರ ಇವುಗಳಿಗೆ ಸಂಬಂಧಿಸಿದಂತೆ ಅನೇಕ ಅಡಚಣೆಗಳ ಹೊರತಾಗಿಯು ಜೀವನವನ್ನು ಉತ್ಕಟಭಾವದಿಂದ ಮತ್ತು ಪ್ರಾಮಾಣಿಕವಾಗಿ ಜೀವಿಸುವುದಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಹೊಣೆಗಾರನಾಗಿರುತ್ತಾನೆ. ಒಬ್ಬ ವ್ಯಕ್ತಿ ಜೀವನವನ್ನು ಹೇಗೆ ಸಾಧಿಸುತ್ತಾನೆ, ಪೂರ್ಣತೆಯ ಜೀವನವನ್ನು ಯಾವೆಲ್ಲಾ ಘಟಕಗಳು ರೂಪಿಸುತ್ತವೆ, ಯಾವೆಲ್ಲಾ ಅಡಚಣೆಗಳನ್ನು ದಾಟಿಕೊಂಡು ಬರಬೇಕಾಗುತ್ತದೆ, ದೇವರ ಅಸ್ತಿತ್ವ ಹಾಗೂ ಅಸ್ತಿತ್ವ ಇರದಿರುವಿಕೆಯ ಸಂಭವನೀಯ ಪರಿಣಾಮಗಳನ್ನು ಒಳಗೊಂಡಂತೆ ಯಾವೆಲ್ಲಾ ಬಾಹ್ಯ ಹಾಗು ಆಂತರಿಕ ಅಂಶಗಳು ಸೇರಿಕೊಂಡಿವೆ ಎಂಬುದರ ಕುರಿತ ವಿವರವೇ ಅಸ್ತಿತ್ವವಾದ”.

ವಾಸ್ತವವಾಗಿ ಅಸ್ತಿತ್ವವಾದ ಮಾನವ ಅನುಭವದಿಂದ ಅನೂಹ್ಯವಾಗಿರುವಂತದ್ದು.‘ಅಸ್ತಿತ್ವವಾದ’ ಎಂಬ ಶಬ್ದವು ಫ್ರೆಂಚ್ ದಾರ್ಶನಿಕ ‘ಗೆಬ್ರಿಯಲ್ ಮಾರ್ಷಲ್’ನಿಂದ 1940ರ ದಶಕದಲ್ಲಿ ರೂಪಿಸಲ್ಪಟಿದೆ.ಇದನ್ನು ಅಳವಡಿಸಿಕೊಂಡು ‘ಜೀನ್ ಪಾಲ್ ಸಾರ್ತ್ರೆ’ 1945ರ ಅಕ್ಟೋಬರ್ 29ರಂದು ಪ್ಯಾರಿಸ್‌ನಲ್ಲಿ ಕ್ಲಬ್ ಮೇಂಟಿನೆಂಟ್‌ಗೆ ನೀಡಿದ ಉಪನ್ಯಾಸವೊಂದರಲ್ಲಿತನ್ನದೇ ಆದ ಅಸ್ತಿತ್ವವಾದವನ್ನುಚರ್ಚಿಸಿದೆ.ಈ ಉಪನ್ಯಾಸವು “ಎಲ್‌ಎಕ್ಸಿಸ್ಟಂಷಿಯಾಲಿಸ್ಮಿ ಎಸ್ಟ್ ಉನ್ ಹ್ಯಮಾನಿಸ್ಮೆ” ಎಂಬ ಒಂದು ಕಿರು ಪುಸ್ತಕವಾಗಿ ಪ್ರಕಟವಾಯಿತು.ಅದು ಅಸ್ತಿತ್ವವಾದಿ ಚಿಂತನೆಯನ್ನು ಹೆಚ್ಚು ಜನಪ್ರಿಯಗೊಳಿಸಿತು.ವಾರ್ಟಿನ ಹೆಡೀಗ್ಗರ್ ಎಂಬಾತ ಮಾನವ ಅಸ್ತಿತ್ವವನ್ನು ತನ್ನ ಕೃತಿಯ ಕೇಂದ್ರಬಿಂದುವಾಗಿ 1920ರ ದಶಕದಿಂದಲೂ ರೂಪಿಸಿದ್ದನ್ನು, ಕಾಲ್ ಜಾಸ್ಪರ್ಸ್ ಎಂಬಾತ 1930ರ ದಶಕದಲ್ಲಿ ಬಂದ ತನ್ನ ತತ್ವಶಾಸ್ತ್ರವನ್ನು ‘ಎಕ್ಸಿಸ್ಟೆಂಜ್ ಫಿಲೋಸಫೀ’ ಎಂದು ಕರೆದಿದ್ದ.

ಅಸ್ತಿತ್ವವಾದಕ್ಕೆ ಪ್ರಮುಖರೆನಿಸಿದ್ದ ಮೊದಲ ಸಾಹಿತ್ಯಕ ಲೇಖಕರಲ್ಲಿ ಝೆಕ್‌ನ ಫ್ರಾಂಜ್ ಕಾಫ್ಕಾ ಹಾಗೂ ರಷ್ಯಾದ ಫ್ಯೆಯೋಡರ್ ದಾಸ್ತೋವ್ಸ್ಕಿ ಪ್ರಮುಖರು.ದಾಸ್ತೋವ್ಸ್ಕಿಯ “ನೋಟ್ಸ್ ಫ್ರಂ ಅಂಡರ್‌ಗ್ರೌಂಡ್” ಕೃತಿಯು ಸಮಾಜದೊಳಗೆ ಹೊಂದಿಕೊಳ್ಳಲು ಅಸಮರ್ಥನಾದ ಓರ್ವ ಮನುಷ್ಯನನ್ನು ಹಾಗೂ ಸ್ವತಃ ತಾನೇ ಸೃಷ್ಟಿಸಿಕೊಳ್ಳುವ ಅಸಂತೋಷವನ್ನು ಚಿತ್ರಿಸುತ್ತದೆ.20ನೇ ಶತಮಾನದ ಮೊದಲ ದಶಕಗಳಲ್ಲಿ ಹಲವಾರು ದಾರ್ಶನಿಕರು ಮತ್ತು ಬರಹಗಾರರು ಅಸ್ತಿತ್ವವಾದದ ಪರಿಕಲ್ಪನೆಗಳನ್ನು ಪರಿಶೋಧಿಸಿದ್ದರ ಫಲವಾಗಿ ಎರಡನೇ ಜಾಗತಿಕ ಸಮರದ ಸಂದರ್ಭದಲ್ಲಿ ಅಸ್ತಿತ್ವವಾದವು ಒಂದು ಚಿರಪರಿಚಿತ ಹಾಗೂ ಗಮನಾರ್ಹವಾದ ತತ್ವ ಚಿಂತನೆಯಾಗಿ ಸಾಂಸ್ಕೃತಿಕ ಆಂದೋಲನವಾಗಿ ರೂಪುಗೊಂಡಿತು.

ಅಸ್ತಿತ್ವವಾದ ಜೀನ್ ಪಾಲ್ ಸಾತ್ರೆ ಮತ್ತು ಆಲ್ಬರ್ಟ್ ಕ್ಯಾಮಸ್ ಎಂಬ ಫ್ರೆಂಚ್ ಬರಹಗಾರರು ಬರೆದ ಜನಪ್ರಿಯ ಕಾದಂಬರಿಗಳು, ನಾಟಕಗಳು ಮತ್ತು ವ್ಯಾಪಕವಾಗಿ ಬಂದ ಪತ್ರಿಕಾ ಬರಹಗಳು ಹಾಗೂ ತಾತ್ವಿಕ ಪಠ್ಯಗಳಿಂದ ಹೆಚ್ಚು ಪ್ರಖ್ಯಾತಿಯನ್ನು ಪಡೆಯಿತು. ಅಸ್ತಿತ್ವವು ಇರುವಿಕೆಗೆ ಅಗ್ರಗಾಮಿಯಾಗಿ ಬರುತ್ತದೆ ಎಂಬುದು ಅವನ ಅಥವಾ ಅವಳ "ಇರುವಿಕೆ" ಎಂದು ಯಾವುದನ್ನು ಕರೆಯಬಹುದೋ ಅದರ ಘಟಕವಾಗಿರುತ್ತದೆಯೇ ಹೊರತು ಒಬ್ಬ ವ್ಯಕ್ತಿ ಹೇಗಿರಬೇಕೆಂದು ವಿಶದೀಕರಿಸುವ, ಅಲ್ಲಿರುವ ಒಂದು ಮೊದಲೇ ನಿರ್ಣಯಿಸಲ್ಪಟ್ಟ ಇರುವಿಕೆಯಲ್ಲ. ಈ ರೀತಿಯಾಗಿ ಮಾನವ ಜೀವಿಯು ತನ್ನ ಜಾಗೃತಿ ಅಥವಾ ಅರಿವಿನ ಮೂಲಕ ತನ್ನದೇ ಆದ ಮೌಲ್ಯಗಳನ್ನು ಸೃಷ್ಟಿಸುತ್ತಾನೆ. ಹಾಗೂ ತನ್ನ ಜೀವನಕ್ಕೆ ಒಂದು ಅರ್ಥವನ್ನು ನಿರ್ಣಯಿಸುತ್ತಾನೆ.

ಸಿಮೋನ್ ದ ಬೋವ ಓರ್ವ ಪ್ರಮುಖ ಅಸ್ತಿತ್ವವಾದಿಯಾಗಿದ್ದು ತನ್ನ ಜೀವನದ ಬಹುಭಾಗವನ್ನು ಆಕೆ ಸಾರ್ತ್ರೆಯ ಸಹಭಾಗಿಯಾಗಿ ಕಳೆದಳು.'ದಿ ಸೆಕೆಂಡ್ ಸೆಕ್ಸ್' ಹಾಗೂ 'ದಿ ಎಥಿಕ್ಸ್ ಆಫ್ ಆಂಬಿಗಿಟಿ' ಸೇರಿದಂತೆ ತನ್ನ ಕೃತಿಗಳಲ್ಲಿ ಆಕೆ ಮಹಿಳಾ ಮಾನವತಾವಾದಿ ಹಾಗೂ ಅಸ್ತಿತ್ವವಾದದ ನೈತಿಕತೆಗೆ ಸಂಬಂಧಿಸಿದಂತೆ ಬರೆದಳು.ಮಹಿಳಾ ಸಮಾನತಾವಾದದಂಥ ಚಿಂತನೆಯ ಇತರ ಸ್ವರೂಪಗಳೊಂದಿಗೆ ಅಸ್ತಿತ್ವವಾದವನ್ನು ಪ್ರತಿಪಾದಿಸಿದಳು.

ಕೆ.ವಿ. ತಿರುಮಲೇಶ್‌ರವರು 'ಅಸ್ತಿತ್ವವಾದ' ಕೃತಿಯಲ್ಲಿ ಹೇಳಿರುವಂತೆ "ಪ್ರತಿಯೊಬ್ಬ ಮನುಷ್ಯನೂ ತನ್ನ ಸ್ವಾತಂತ್ರ್ಯವನ್ನು ಚಲಾಯಿಸಲೇ ಬೇಕಾಗುತ್ತದೆ.ಇದು ದೇವರಿಲ್ಲದ ಪ್ರಪಂಚ. ಆದ್ದರಿಂದ ತನ್ನ ಆಯ್ಕೆಯನ್ನು ದೇವರ ಮೇಲೆ ಹೊರಿಸುವಂತಿಲ್ಲ. ಯಾವುದಕ್ಕೂ ದೇವರನ್ನು ಅವಲಂಬಿಸುವಂತೆಯೂ ಇಲ್ಲ. ಅದೇ ರೀತಿ ದೇವರ ಸ್ಥಾನದಲ್ಲಿ ಇತರ ಅಧಿಕಾರಿಗಳನ್ನು ಕೂರಿಸಿ ಅವರಿಂದ ನಿರ್ದೇಶನವನ್ನು ಪಡೆಯುವಂತಿಲ್ಲ. ಯಾಕೆಂದರೆ ಮನುಷ್ಯನು ತನಗೆ ತಾನೇ ಹೊಣೆಯಾಗಿರುತ್ತಾನೆ. ಅದಕ್ಕೆ ಇತರರನ್ನು ಹೊಣೆಯಾಗಿಸಿ ವರ್ತಿಸುವುದು ಬ್ಯಾಡ್ ಫೇಯ್ತ್ ಅರ್ಥಾತ್ ಆತ್ಮವಂಚನೆಯಾಗುತ್ತದೆ."[1]

ಅಸ್ತಿತ್ವವಾದ ವ್ಯಕ್ತಿಗೆ ಸಂಬಂಧಿಸಿದ್ದರು ಅದು ಸಾಮಾಜಿಕ ತತ್ವಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ.ಪ್ರತಿಯೊಬ್ಬ ವ್ಯಕ್ತಿಯ ಆಯ್ಕೆಯು ಅವನ ಸುತ್ತಲಿನ ಸಮಾಜದ ಮೇಲೆ ಪರಿಣಾಮ ಬೀರುತ್ತದೆ.ವ್ಯಕಿಯ ಪ್ರತಿಯೊಂದು ಆಯ್ಕೆಗೂ ಸ್ವಾತಂತ್ರ್ಯವಿದ್ದರೂ ಅದು ಅರ್ಥಪೂರ್ಣವೆನಿಸುವುದು ಸಾಮಾಜಿಕವಾದಾಗ ಮಾತ್ರ.

ಅಸ್ತಿತ್ವವಾದದಲ್ಲಿ ಆಸ್ತಿಕ ಮತ್ತು ನಾಸ್ತಿಕ ಎಂಬ ಎರಡು ಪ್ರಧಾನ ಕವಲುಗಳಿವೆ. ಆಸ್ತಿಕ ಅಸ್ತಿತ್ವವಾದವು ಬಹಳ ಹಳೆಯದು.ನಾಸ್ತಿಕ ಅಸ್ತಿತ್ವವಾದ ಹೊಸದು ಆದರೆ ಎರಡು ಸಮಾನವಾದ ಹಾಗೂ ಪ್ರಧಾನವಾದ ಗುಣಗಳನ್ನು ಒಳಗೊಂಡಿದೆ.ಪ್ರತಿಯೊಬ್ಬ ಮನುಷ್ಯನು ತನ್ನ ಬದುಕಿಗೆ ತಾನೇ ಹೊಣೆಗಾರ.ಆಸ್ತಿಕ ಅಸ್ತಿತ್ವವಾದ ದೇವರ ಇರುವಿಕೆಯನ್ನು ನಂಬುತ್ತದೆ.ನಾಸ್ತಿಕ ಅಸ್ತಿತ್ವವಾದ ದೇವರ ಇರುವಿಕೆಯನ್ನು ಅಲ್ಲಗಳೆಯುತ್ತದೆ.

ವೈಜ್ಞಾನಿಕ ಹಾಗೂ ತಾರ್ಕಿಕ ಆಲೋಚನೆಗಳ ಕಾರಣದಿಂದ ದೇವರು ಎಂಬ ಪರಿಕಲ್ಪನೆ ಮರೆಯಾಗುತ್ತಾ ಇದೆ.ಸರ್ವಶಕ್ತನು, ಸರ್ವಾಂತರ್ಯಾಮಿಯು, ಸರ್ವಜ್ಞಾನಿಯೂ, ಸರ್ವಕಾರಣನು ಆದ ದೇವರ ಇರುವಿಕೆಯನ್ನು ವೈಜ್ಞಾನಿಕ ಮನೋಧರ್ಮದ ಆಧುನಿಕ ಮನಸ್ಸು ಅಲ್ಲಗಳೆಯುತ್ತಿದೆ.ಅನಂತ ಜಗತ್ತಿನಲ್ಲಿ ಮನುಷ್ಯನ ಜೀವನದ ಅವಧಿ ಅಲ್ಪಕಾಲಿಕ.ಜಗತ್ತಿನ ಉಗಮದಲ್ಲಾಗಲಿ, ಅಂತ್ಯದಲ್ಲಾಗಲಿ ಅವನ ಹಸ್ತಕ್ಷೇಪವಿಲ್ಲ. ಹಾಗಿದ್ದರೆ ಅವನ ಜೀವನದ ಜವಾಬ್ದಾರಿ ಎಲ್ಲಿಂದ ಪ್ರಾರಂಭವಾಯಿತು, ಎಲ್ಲಿ ಕೊನೆಗೊಳ್ಳುತ್ತದೆ ತೀರ್ಮಾನಿಸುವವರು ಯಾರು ಮತ್ತು ಹೇಗೆ? ಎಂಬ ಪ್ರಶ್ನೆ ಕಾಡುತ್ತದೆ.ಅನಂತಕೋಟಿ ವರ್ಷದಿಂದ ಅನಂತ ಜಗತ್ತು ಮುಂದುವರೆದುಕೊಂಡು ಬಂದಿದೆ ಮುಂದೆಯು ಮುಂದುವರಿಯುತ್ತದೆ." ಭಾಷೆಯೆ ನನ್ನ ಜಗತ್ತಿನ ಸೀಮೆ"[2] ಎಂದು ಎಟಗನ್ ಸ್ಟೈನ್ ಹೇಳುತ್ತಾನೆ. ಇಂದು ವೈಜ್ಞಾನಿಕವಾಗಿ ರೂಪುಗೊಂಡಿರುವ ಗಣಿತ, ಭೌತವಿಜ್ಞಾನ, ರಸಾಯನ ವಿಜ್ಞಾನ ಮುಂತಾದವುಗಳನ್ನು ಆಧುನಿಕವಾಗಿ ಮನುಷ್ಯ ಆವಿಷ್ಕರಿಸಿಕೊಂಡಿದ್ದಾನಾದರೂ ಆ ಶಾಸ್ತ್ರಗಳು ಕೂಡ ಜಗತ್ತಿನ ಆದಿ, ಅಂತ್ಯಗಳ ಕುರಿತು ಏನನ್ನು ಹೇಳಲಾರವು.ಅನಂತತೆಯ ನಿರಂತರ ಚಲನೆಯೊಂದಿಗೆ ಆದಿ ಅನಂತತೆಯ ಕಲ್ಪನೆಯೊಂದಿಗೆ ಈ ನಿರಂತರ ವಾಸ್ತವವನ್ನು ಹೊಂದಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆಯು ಮುಖ್ಯವಾದುದು.

ಅಸ್ತಿತ್ವವಾದವನ್ನೇ ಹೋಲುವ ಆದರೆ ಅದಕ್ಕಿಂತ ಕೆಲವು ಭಿನ್ನವಾದ ಸಿದ್ಧಾಂತಗಳನ್ನು ಸಂಕ್ಷೇಪವಾಗಿ ಅವಲೋಕನ ಮಾಡುವುದು ಸೂಕ್ತವಾಗುತ್ತದೆ.ಇದರಲ್ಲಿ ಮುಖ್ಯವಾಗಿ ಪ್ರಯೋಗವಾದ, ಮಾನವತಾವಾದ, ಆದರ್ಶವಾದ, ಪ್ರಯೋಜನವಾದ, ಶೂನ್ಯವಾದ ಮತ್ತು ಅರಾಜಕವಾದವನ್ನು

ಪ್ರಯೋಗವಾದ ಇಂದ್ರಿಯಗಳ ಅನುಭವಕ್ಕೆ ಸಿಗುವ ಸಂಗತಿಗಳನ್ನು ಮಾತ್ರ ವಾಸ್ತವವೆಂದು ನಂಬುವ ಜ್ಞಾನವಾಗಿ ಕಂಡು ಬರುತ್ತದೆ.ಆದರೆ ಈ ವಾಸ್ತವವಾದ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ.ನನಗೆ ವಾಸ್ತವವೆನಿಸಿದ ಜ್ಞಾನ ಬೇರೆಯವರಿಗೆ ವಾಸ್ತವ ಅನಿಸಿರಬಹುದು.ಹಾಗಾದರೆ ಗ್ರಹಿಸುವ ಇಂದ್ರಿಯಗಳಲ್ಲಿ ಭಿನ್ನತೆ ಇರಬೇಕು.ಇದು ವ್ಯಕ್ತಿ ಕೇಂದ್ರಿತವಾಗಿದೆ.ಜಾನ್‌ಲಾಕ್, ಜಾರ್ಜ್ ಬರ್ಕ್ಲಿ, ಡೇವಿಡ್ ಹ್ಯೂಮ ಪ್ರಯೋಗವಾದದಲ್ಲಿ ಹೆಸರುಗಳಿಸಿದವರು.

ಮಾನವತಾವಾದ ಜಗತ್ತಿನ ಅತ್ಯಂತ ಪ್ರಾಚೀನವಾದ ಸರ್ವವ್ಯಾಪಿಯಾದ ಸಿದ್ಧಾಂತ."ಧರ್ಮಪೇಕ್ಷ ಮಾನವತಾವಾದಕ್ಕಿಂತಲೂ ಧರ್ಮನಿರಪೇಕ್ಷ ಮಾನವತಾವಾದವೇ ಇಂದು ಹೆಚ್ಚು ಜನಪ್ರಿಯವಾದದ್ದು"[3] ಜೆರೆಮಿ ಬೆಂಥೆಮ್, ಥಾಮಸ್ ಪೈನ್, ವೋಲ್ಟೇರ್, ಡಿಡಿಗೊ ಮುಂತಾದವರು ಮಾನವತಾವಾದವನ್ನು ಪ್ರತಿಪಾದಿಸಿದವರು.ಮಾನವೀಯತೆಯ ಮೌಲ್ಯಗಳನ್ನು ಒಪ್ಪಿಕೊಂಡು ಇವುಗಳಿಗೋಸ್ಕರವಾಗಿ ಬದುಕುವುದೇ ಮಾನವಧರ್ಮವಾಗಿದೆ.

ಶರಣ ಸಾಹಿತ್ಯವನ್ನು ಗಮನಿಸಿದರೆ ಬಸವಣ್ಣನ "ದಯವಿಲ್ಲದ ಧರ್ಮವಾವುದಯ್ಯ, ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ ದಯವೇ ಧರ್ಮದ ಮೂಲವಯ್ಯ"[4]ಪ್ರವಾದಿ ಮಹಮ್ಮದ್ ಕುರಾನಿನಲ್ಲಿ "ಜೀವವಿರುವ ಯಾವುದೇ ವಸ್ತುವಿಗೆ ಕರುಣೆ ತೋರಿಸಿದರೂ ಅದಕ್ಕೆ ಪುಣ್ಯವಿದೆ" ಎಂದಿದ್ದಾರೆ.ಮನುಷ್ಯನಿಗೆ ಬೇರೆಯವರ ಕಷ್ಟವನ್ನು ನೋಡಿ ಕನಿಕರವಿದ್ದರಷ್ಟೇ ಸಾಲದು, ಸಹಾಯ ಮಾಡುವ ಗುಣವೂ ಇರಬೇಕು.ಕುವೆಂಪು ಅವರ "ಯಾವಕಾಲದ ಶಾಸ್ತ್ರವೇನು ಹೇಳಿದರೇನು ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು"[5] ಮಾನವತಾವಾದ ನಮ್ಮ ಸಂಸ್ಕೃತಿಯ ತಳಹದಿಯೂ ಹೌದು.

ಆದರ್ಶವಾದ ಮಾಯಾವಾದದ ಇನ್ನೊಂದು ರೂಪ. ನಮಗೆ ಸಾಮಾನ್ಯವಾಗಿ ಗೋಚರವಾಗುವುದು ನಮ್ಮ ಛಾಯೆಗಳು,

1. ಅಸ್ತಿತ್ವವಾದ, ಅರಿಕೆ, ಪುಟ–6

2. ಅಸ್ತಿತ್ವವಾದ, ಅರಿಕೆ, ಪುಟ–7

3. ಅಸ್ತಿತ್ವವಾದ, ಪುಟ–36

4. ಬಸವಣ್ಣನವರ ವಚನಗಳು

5.ಕುವೆಂಪು ಅವರ ಪದ್ಯ, ಯಾವಕಾಲದ ಶಾಸ್ತ್ರವೇನು ಹೇಳಿದರೇನು

ಗೋಡೆಯ ಮೇಲೆ ಬೀಳುವ ನೆರಳುಗಳಂತೆ ಬೆಳಕು ನಮ್ಮ ಹಿಂದೆ ಇರುವುದರಿಂದಲೇ ಬೆಳಕಿನ ಪ್ರಭಾವದಿಂದ ನಮ್ಮ ನೆರಳನ್ನು ನೋಡಲು ಸಾಧ್ಯ.ಆ ನೆರಳುಗಳಿಂದ ಹೊರ ಬಂದು ಬೆಳಕಿನೆಡೆಗೆ ಸಾಗುವುದೇ ಜ್ಞಾನ. ಆ ನೆರಳಿನ ಕತ್ತಲೆಯಿಂದ ಬೆಳಕಿನೆಡೆಗೆ ಬರಬೇಕಾದರೆ, ಜ್ಞಾನದ ಜಿಜ್ಞಾಸೆಯಿಂದ ಮಾತ್ರ ಸಾಧ್ಯವಾಗುತ್ತದೆ.ಈ ಜಿಜ್ಞಾಸೆಗೆ ಸಾಕ್ರೇಟಿಸ ಬಳಸಿದ ವಿದ ಅನ್ವೇಷಣೆ ಅಥವಾ ಖಟಿತಿಥಖುಟಿಚಿಟಿಖುತಿಜ ತತ್ವಶಾಸ್ತ್ರದಲ್ಲಿ ಆದರ್ಶವಾದವು ಆಧ್ಯಾತ್ಮಿಕ ದೃಷ್ಟಿಕೋನಗಳಿಂದ ಗುರುತಿಸಬಹುದಾಗಿದೆ.ಇದು ವಾಸ್ತವದ ಗ್ರಹಿಕೆ ಮತ್ತು ತಿಳುವಳಿಕೆಯಿಂದ ಪ್ರತ್ಯೇಕಿಸಲಾಗದು, ವಾಸ್ತವವು ಆಲೋಚನೆಗಳೊಂದಿಗೆ ನಿಕಟವಾಗಿ ಸಂಪರ್ಕಹೊಂದಿದ ಮಾನಸಿಕ ರಚನೆಯಾಗಿದೆ.

ಪ್ರಯೋಜನವಾದವು ನಂಬಿಕೆ, ಕ್ರಿಯೆಗೂ ಇರುವ ನೇರ ಸಂಬಂಧವನ್ನು ತಿಳಿಸುತ್ತದೆ.ಜಗತ್ತೆಂಬುದು ಅನೇಕ ರೀತಿಯ ಸಂಬಂಧಗಳ ಒಂದು ಜಾಲ. ಈ ಸಂಬಂಧಗಳ ಜ್ಞಾನವನ್ನು ಪಡೆಯುವಂತದ್ದು ಮನಸ್ಸು.ಭಾವದಿಂದಾಗಲಿ, ವೇದನೆಗಳಿಂದಾಗಲಿ ನಮಗೆ ಈ ಸಂಬಂಧಜ್ಞಾನ ದೊರಕುತ್ತದೆ.ಇದು ಬುದ್ಧಿಗೆ ಗೋಚರವಾಗುವ ಅನುಭವದಿಂದ ಮಾತ್ರ ಪ್ರಾಪ್ತವಾಗುತ್ತದೆ.ಇದೇ ಪ್ರಜ್ಞೆಯಾವುದೇ ಮನುಷ್ಯನ ವಿಶ್ವಾಸದ ಪರೀಕ್ಷೆಯಿರುವುದು ಅವನ ಸೋಲು-ಗೆಲುವಿನ ತೀರ್ಮಾನದಲ್ಲಿ ಹಾಗೂ ಅದಕ್ಕಾಗಿ ಅವನು ಕೈಗೂಡಿಸುವ ಸಾಧನೆಯಲ್ಲಿ.ಸಿ.ಎಸ್. ಪರ್ಸಿ, ವಿಲಿಯಂ ಜೇಮ್ಸ್, ಬಾನ್‌ಡ್ಯೂವಿ ಈ ಕ್ಷೇತ್ರದಲ್ಲಿ ಹೆಸರುಗಳಿಸಿದವರು.ಮನುಷ್ಯ ಸಣ್ಣ-ಪುಟ್ಟ ಗೆಲುವುಗಳನ್ನು ಲೆಕ್ಕ ಹಾಕುತ್ತಾ ಬದುಕಿನ ಮೇಲ್ಪದರದಲ್ಲಿಯೆ ಖುಷಿಪಡುತ್ತಾನೆ. ಯಾವ ಆಳದ ಅನುಭವವನ್ನು ಪಡೆಯಲಾರ."ಕುರಿ ಕಟ್ಟಿನ ಹೊರಗಿನ ಸಿಪ್ಪೆಯನ್ನು ತಿಂದು ಸಿಹಿಯನ್ನು ಅನುಭವಿಸಿದಂತಿದೆ" ಅಸ್ತಿತ್ವವಾದದ ಆಸಕ್ತಿಯಿರುವುದು ಬದುಕಿನ ಒಟ್ಟಾರೆ ತೀವ್ರತೆಯೆ ಹೊರತು ಬಾಹ್ಯಗಳಿಕೆಗಳಿಂದ ಸಿಗುವ ಅಲ್ಪ ಸಂತೋಷದಿಂದಲ್ಲ.

ಶೂನ್ಯವಾದ ಅಥವಾ ಅರಾಜಕವಾದ ಎಲ್ಲಾ ಕಾಲದಲ್ಲೂ ಎಲ್ಲಾ ದೇಶಗಳಲ್ಲಿಯೂ ಇರುವಂತಹದೇ.ಪರಂಪರೆಯ ವಿರುದ್ಧವಾಗಿ ಬಂಡಾಯವೆದ್ದು ಅದನ್ನು ಧಿಕ್ಕರಿಸುವುದು ಯಾವ ಸಿದ್ಧಮೌಲ್ಯಗಳನ್ನು ಒಪ್ಪದೇ ಇರುವುದು.ತನಗೆ ವಿರುದ್ಧವಾಗಿರುವ ಸಂಗತಿಗಳನ್ನು ನಾವು ಯಾಕೆ ಒಪ್ಪಬೇಕು. ಅಭೌತಿಕವಾದ ಶಕ್ತಿಗಳನ್ನು, ಅಧಿಕಾರಗಳನ್ನು, ವ್ಯವಸ್ಥೆಗಳನ್ನು ತಿರಸ್ಕರಿಸುವುದರೊಂದಿಗೆ ದೇವರು, ಸರಕಾರ ಹಾಗೂ ಸಮಾಜವನ್ನು ಕೂಡ ವಿರೋಧಿಸುತ್ತದೆ.ಶೂನ್ಯವಾದ, ನಶ್ವರವಾದ, ಅರಾಜಕವಾದ, ನಾಸ್ತಿಕವಾದಗಳಿಗೆ ಪರಸ್ಪರ ಸಾಮ್ಯತೆ ಇದೆ.ಯುರೋಪಿಯನ್ ಶೂನ್ಯವಾದವು ಮೊದಲು ಪ್ರಚಾರ ಪಡೆದದ್ದು ರಶಿಯಾದ ಲೇಖಕ ಐವಾನ್ ಟರ್ಗಿನೇಟ್‌ನ "ಅಪ್ಪಂದಿರು ಮತ್ತು ಮಗಂದಿರು" ಎಂಬ ಕಾದಂಬರಿಯ ಮೂಲಕ. ಪಾಶ್ಚಾತ್ಯರ ಶೂನ್ಯವಾದ ಹಾಗೂ ಅರಾಜಕವಾದದಂತೆ ಭಾರತದ ಕ್ರಿ.ಪೂ. 6ನೇ ಶತಮಾನದ ಉತ್ತರ ಭಾರತದ ಸ್ಥಿತಿಗಳನ್ನು ಗಮನಿಸಬೇಕು.ವೈದಿಕ ಮತ್ತು ವೈದಿಕೇತರ ಸಮುದಾಯಗಳ ಅತೃಪ್ತಿಗಳ ಫಲವಾಗಿಯೆ ಬುದ್ಧನ ಆಗಮನವಾಯಿತು."ದೇವರ ಅಸ್ತಿತ್ವಕ್ಕಿಂತ ದುಗುಡಕ್ಕೆ, ಗಹನ ಚರ್ಚೆಗಳಿಗಿಂತ ನೈತಿಕತೆಗೆ, ಉಪದೇಶಕ್ಕಿಂತ ಮಾಡುವ ಕರ್ಮಗಳಿಗೆ, ಜ್ಞಾನದ ವಿಚಾರಗಳಿಗೆ ಹೆಚ್ಚು ಮಹತ್ವ ನೀಡಿದ ಬುದ್ಧ ದಾರ್ಶನಿಕನಾಗಿರುವುದಕ್ಕಿಂತಲೂ ಜನರಿಗೆ ನೀತಿ ಉಪದೇಶಗಳು ಸಾರವನ್ನು ಅವರ ಮನಸ್ಸಿಗೆರೆಯುತ್ತಾ ಮನಸ್ಸುಗಳ ಸುಧಾರಕನಾದ.ದರ್ಶನ ಮತ್ತು ಸಾಮಾಜಿಕ ದೃಷ್ಟಿಗಳ ಬದಲಾವಣೆಗೆ ಅವಕಾಶವಾಯಿತು.ಅರಾಜಕತೆ ರಾಜಕೀಯ ಹತ್ಯೆಯನ್ನು ಬೆಂಬಲಿಸುತ್ತದೆ.19ನೇ ಶತಮಾನದ ಉತ್ತರಾರ್ಧ ಹಾಗೂ 20ನೇ ಶತಮಾನದ ಪೂರ್ವಾರ್ಧದಲ್ಲಿ ಅರಾಜಕವಾದಿಗಳು ಮಾಡಿದ ಹತ್ಯೆಗಳಿಗೆ ಲೆಕ್ಕವಿಲ್ಲ. ಅರಾಜಕವಾದವು ಅಸ್ತಿತ್ವವಾದದ ಒಂದು ಉಗ್ರ ರೂಪವಾಗಿ ಕಾಣಿಸಿದರೆ ಆಶ್ಚರ್ಯವಿಲ್ಲ.ಅಸ್ತಿತ್ವವಾದದ ಸ್ಥೂಲ ರೂಪು-ರೇಷೆಗಳನ್ನು ಗಮನಿಸಿದಂತೆಯೆ ಅಸ್ತಿತ್ವವಾದಕ್ಕೆ ಕೊಡುಗೆಗಳನ್ನು ನೀಡಿದ ತತ್ತ್ವಜ್ಞಾನಿಗಳ ಸಿದ್ಧಾಂತಗಳನ್ನು ಗಮನಿಸಬೇಕು. ಅದರಲ್ಲಿ ಮುಖ್ಯರಾದವರು "ಡೆನ್ಮಾರ್ಕಿನ ಸೋರೇನ್, ಕಿರ್ಕೆಗಾರ್ಡ್, ಜರ್ಮನಿಯ ಫ್ರೆಡ್ರಿಶ್ ನೀತ್ಸೆ, ಕಾರ್ಟ್‌ಯಾಸ್ಪರ್ಸ್, ಮಾರ್ಟಿನ್ ಹೈಡೆಗರ್, ಫ್ರಾನ್ಸಿನ ಜಾನ್-ಫಾಲ್ ಸಾರ್ತೆ, ಅಲ್ಬರ್ಟ್‌ಕಮೂ, ಗೇಬ್ರಿಯಲ್ ಮಾರ್ಸಲ್, ಸ್ಪೇನಿನ ಮಿಗುವೆಲ್ ದ ಉನೋಮುನೋ, ಜೋಸೆ ಓರ್ತೆಗಾ ಇ ಗಾಸೆ ರಶಿಯಾದ ನಿಕೊಲಾಯ್ ಅಲೆಕ್ಸಾಂಡ್ರೋವಿಚ್, ಬುರ್ದ್ಯೆಯೇಪ್, ಫ್ಯೋಡರ ದೋಸ್ತೋವ್‌ಸ್ಕಿ, ಇಟಲಿಯ ನಿಕೊಲಾ ಅಬಗ್ನಾನೋ ಮುಖ್ಯರಾದವರು.[6]

1) **ಕಿರ್ಕೆಗಾರ್ಡ್:** ಡೆನ್ಮಾರ್ಕಿನ ಸೋರೆನ್ ಕಿರ್ಕೆಗಾರ್ಡ್ ಆದಿ ಪ್ರವರ್ತಕನೆಂದು ತಿಳಿದರೂ ಅವನು ವಾದಿಸಿದ ವಿಚಾರಗಳು ಪ್ರಚಾರಕ್ಕೆ ಬಂದದ್ದು ಮರಣಾನಂತರ. ಅಸ್ತಿತ್ವವಾದವು ಕೆಲವು ಚಾರಿತ್ರಿಕ ಕಾರಣಗಳಾಗಿ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಒಂದು ತಾತ್ವಿಕ ಕ್ರಾಂತಿಯಾಗಿ ಬೆಳೆದು ಬಂದಿತು.ಈ ವಾದ ಪ್ರಚಾರಕ್ಕೆ ಬರಲು 20ನೇ ಶತಮಾನದವರೆಗೆ ಕಾಯಬೇಕಾಗಿ ಬರಲು ಇದ್ದ ಚಾರಿತ್ರಿಕ ಕಾರಣಗಳು ಒಂದನೇ ಮತ್ತು ಎರಡನೇ ಮಹಾಯುದ್ಧಗಳು, ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಆಗಮನ. "ವಾಸಿಯಾಗಲಾರದ ಘಾಯವೊಂದನ್ನು ನನ್ನ ಮೈಯಲ್ಲಿ ಅಡಗಿಸಿಕೊಂಡಿದ್ದೇನೆ... ಬೇರೆಯವರ ಜೊತೆ ಬೆರೆಯುವುದು ಅಸಾಧ್ಯಯವೆನಿಸುತ್ತಿದೆ.ಆದ್ದರಿಂದ ನನಗೆ ನಿಗಧಿಯಾದ ಕಾರ್ಯವು ಬಹಳ ವಿಶಿಷ್ಟವಾದದೆಂಬ ತೀರ್ಮಾನಕ್ಕೆ ಬಂದೆ"[7] ಎಂದು ಹೇಳುವ ಮಾತು ಅಸ್ತಿತ್ವವಾದಕ್ಕೆ ಒಂದು ಭದ್ರವಾದ ತಳಹದಿಯನ್ನು ಹಾಕಿತು.ಕಿರ್ಕೆಗಾರ್ಡ್ ಆಸ್ತಿಕ ಅಸ್ತಿತ್ವವಾದಿ, ಅಸ್ತಿತ್ವದ ಮೂಲಕವೇ ದೇವರ ಜೊತೆ ಸೇರುವುದು ಸಾಧ್ಯ ಎಂದು ನಂಬಿದವನು.ದೇವರ ಜೊತೆ ಕೂಡಿದಾಗಲು ವ್ಯಕ್ತಿ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಾನೆ.

**2) ಫ್ರೆಡಿಶ್ ವಿಲ್ಹೆಲ್ಮ್ ನೀತ್ಸೆ:** ದೇವರು ಸತ್ತಿದ್ದಾನೆ! ಎಂಬ ನೀತ್ಸೆಯ ಘೋಷಣೆ 1882ರಲ್ಲಿ ಪ್ರಕಟವಾದ "ಸುಖೀ ವಿವೇಕ" ಎಂಬ ಕೃತಿಯಲ್ಲಿ ಕ್ರಿಶ್ಚಿಯಾನಿಟಿ ಧರ್ಮ ಒಂದು ಜೀವವಿರೋಧಿ ಧರ್ಮವೆಂದು ದೇವರು ಸತ್ತಿರುವನೆಂದು ಪುಸ್ತಕದಲ್ಲಿ ಘೋಷಿಸುತ್ತಾನೆ. ದೇವರು ಸತ್ತರೆ ದೇವರ ಕೈಕೆಳಗಿದ್ದವರೆಲ್ಲಾ ಸ್ವತಂತ್ರರಾಗುವಂತೆ ಇಡೀ ಮನುಕುಲಕ್ಕೆ ಸ್ವಾತಂತ್ರ್ಯದ ವಾರ್ತೆಯನ್ನು ತಂದವನು.

**3) ಜಾನ್-ಪಾಲ್-ಸಾರ್ತ್ರೆ:** ಫ್ರಾನ್ಸಿನಲ್ಲಿ ನಿರೀಶ್ವರವಾದಿ ಅಸ್ತಿತ್ವವಾದವನ್ನು ಪೂರ್ಣ ಪ್ರಮಾಣದ ಸಿದ್ಧಾಂತವಾಗಿ ರೂಪಿಸಿದವನು ಮನುಷ್ಯನ ಮೇಲೆ ಹೊಣೆಗಾರಿಕೆ ಇಲ್ಲವೆಂದಲ್ಲ. ಪ್ರತಿಯೊಂದು ಆಯ್ಕೆಯು ಒಂದು ಹೊಸ ಜವಬ್ದಾರಿಯನ್ನು ಹೇರಿಕೊಂಡಂತೆ, ತಾನೇ ಸ್ವತಂತ್ರವಾಗಿ ಆರಿಸಿಕೊಂಡ ಜವಬ್ದಾರಿಗಳಿಗೆ ಮನುಷ್ಯನಲ್ಲದೆ ಬೇರೆ ಯಾರು ತಾನೇ ಹೊಣೆಯಾಗಲು ಸಾಧ್ಯ.

ಅಸ್ತಿತ್ವವಾದ ಇರುವಿಕೆಯನ್ನು ಹಾಗೂ ವ್ಯಕ್ತಿಯ ಇರುವಿಕೆಯಲ್ಲಿ

6. ಅಸ್ತಿತ್ವವಾದ, ಪುಟ-42

7. ಅಸ್ತಿತ್ವವಾದ, ಪುಟ-45

ಆಯ್ಕೆಯ ಸ್ವಾತಂತ್ರ್ಯವನ್ನು ಚಲಾಯಿಸುವುದರ ಮೂಲಕ ತನ್ನನ್ನು ತಾನೇ ವಿವರಿಸಿಕೊಳ್ಳುತ್ತಾನೆ. ಇದೇ ಸಾರ್ತ್ರೆ ಹಾಗೂ ಹೈಡಗಲ್ವಿವರಿಸಿದ ತಾತ್ವಿಕ ಅಸ್ತಿತ್ವವಾದ.ಅಸ್ತಿತ್ವವಾದ ವ್ಯಕ್ತಿ ಕೇಂದ್ರಿತವೇ ಹೊರತು ಸಮಾಜ ಕೇಂದ್ರಿತವಲ್ಲ. ಯಸ್ಪರ್ಸ್ ಮತ್ತು ಗೇಬ್ರಿಯಲ್ ಮಾರ್ಕ್ವೇಜ್ ವಿವರಿಸಿದ ಅಸ್ತಿತ್ವವಾದವು ವ್ಯಕ್ತಿಯ ಆಯ್ಕೆ ಧಾರ್ಮಿಕ ಸ್ವರೂಪದಾಗಿದ್ದು ಅದು ದೇವರತ್ತ ಕರೆದದೊಯ್ಯುವಂತಾಗಿರಬೇಕು ಎಂದು ಹೇಳುತ್ತಾರೆ. "ಇದು ಮನುಷ್ಯನ ಅಸ್ತಿತ್ವವನ್ನು ಕುರಿತ ಚಿಂತನೆ, ಆಲೋಚನೆ ಬದುಕಿನ ರಹಸ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಅಸಮರ್ಪಕವಾಗಿರುತ್ತದೆ.ಕಳವಳ, ವೇದನೆ ಒಂದೇ ಬದುಕಿನಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವುದರಿಂದ ಮಾತ್ರ ನೈತಿಕತೆಯು ದೊರೆಯುತ್ತದೆ. ಆಧ್ಯಾತ್ಮಿಕ ಪ್ರಜ್ಞೆಗಳು ಮನುಷ್ಯನಲ್ಲಿ ಕಾಣೆಯಾಗುತ್ತಿವೆ. ಮನುಷ್ಯನಲ್ಲಿ ಮೂಲಭೂತವಾಗಿ ಇರಬೇಕಾಗಿದ್ದ ಮನುಷ್ಯ–ಮನುಷ್ಯರ, ವಸ್ತು–ವಸ್ತುವಿನ, ಭೂತ–ವರ್ತಮಾನ–ಭವಿಷ್ಯಗಳ ಐಕ್ಯತೆಗಳ ನಷ್ಟದಿಂದಾಗಿ ಭೂತ–ಭವಿಷ್ಯಗಳ ಸಂಬಂಧ ಕಡಿದು ವರ್ತಮಾನದ ಕ್ಷಣಗಳಲ್ಲಿ ಕಾಲದ ಪ್ರವಾಹದಲ್ಲಿರುವಂತೆ ಭಾಸವಾಗುತ್ತದೆ.

## ಪುರಾಣ, ಪರಂಪರೆ ಹಾಗೂ ಕನ್ನಡ ಸಾಹಿತ್ಯದ ಮೇಲೆ ಅಸ್ತಿತ್ವವಾದದ ಪ್ರಭಾವ

ಭಾರತೀಯ ಸಂಸ್ಕೃತಿಗೆ ಅಸ್ತಿತ್ವವಾದ ಹೊಸತಲ್ಲ. ವೈಧಿಕ ಅವೈಧಿಕ ದಾರ್ಶನಿಕ ಚಿಂತನೆಗಳೆಲ್ಲವೂ ಅಸ್ತಿತ್ವವಾದದ ಮೂಲದಿಂದಲೇ ಹುಟ್ಟಿದವು.ವೈಧಿಕ ಪುರಾಣಗಳು ಅದಕ್ಕೆ ಪ್ರತಿಯಾಗಿ ನಿರೂಪಿತಗೊಂಡ ನಾಥ,ಆರೂಡ, ಅವಧೂತ, ಶರಣ, ಶಾಕ್ತ, ಸೂಫಿ ಪರಂಪರೆಗಳುಅಸ್ತಿತ್ವವಾದದ ಪ್ರಶ್ನೆ ಎತ್ತುತ್ತವೆ. ಬೆಡಗಿನ ವಚನಗಳನ್ನು ಬರೆದ ಶಿವಶರಣರು, ಅಂಥದೇ ಗೀತೆಗಳನ್ನು ರಚಿಸಿದ ಜ್ಞಾನದೇವ, ಮುಕ್ತಾಬಾಯಿ, ಗೋರಖನಾಥ, ಕಬೀರ ಇವರೆಲ್ಲ ಅಸ್ತಿತ್ವವಾದಿಗಳೇ.ವಚನ ಸಾಹಿತ್ಯ, ಕೀರ್ತನ ಸಾಹಿತ್ಯ ಇವುಗಳಲ್ಲಿ ದೇವರ ಅಸ್ತಿತ್ವದ ಇರುವಿಕೆ ಒಪ್ಪಿತವಾದ ಸಿದ್ಧಾಂತ, ಪುರಾಣಗಳು, ವಿಷ್ಣುವಿನ ದಶಾವತಾರದ ವರ್ಣನೆ ಜಗತ್ತಿನ ಅಸ್ತಿತ್ವದ ಪರಿಕಲ್ಪನೆಯ ಚಿತ್ರಣವಾಗಿಯೆ ರೂಪಿತಗೊಂಡಿದೆ.ದೇವರ ಅಸ್ತಿತ್ವದ ಇರುವಿಕೆಯನ್ನು ಅನೇಕ ವಾದಗಳ ನಡುವೆಯೂ ತನ್ನದೇ ನೆಲೆಯಲ್ಲಿ ಒಪ್ಪಿಕೊಂಡಿವೆ.

ಹಾಗಾದರೆ 'ಅಸ್ತಿತ್ವವಾದ' ಎನ್ನುವುದು ಕೇವಲ ಪಾಶ್ಚಿಮಾತ್ಯರ ಚಿಂತನೆಯೆ? ಇದು ದೇಶಿಯ ಸಾಹಿತ್ಯಗಳಲ್ಲಿ ಲಭ್ಯವಿಲ್ಲವೇ? ಎಂದು ಪ್ರಶ್ನಿಸಿಕೊಂಡಾಗ, ಅಸ್ತಿತ್ವವಾದ ಎನ್ನುವ ಪರಿಕಲ್ಪನೆ ದೇಶಿಯಕ್ಕೆ ಹೊಸತೆ! ಅಸ್ತಿತ್ವವಾದ ಚಿಂತನೆಗಳು, ನಿಯಮಗಳು, ಧೋರಣೆಗಳು, ಆಶಯಗಳು ಭಾರತೀಯ ಸಾಹಿತ್ಯಗಳಲ್ಲಿಯು ಹೇರಳವಾಗಿ ಗೋಚರಿಸುತ್ತದೆ.ಆದರೆ ಇವಾವು ಸಿದ್ಧಾಂತದ ರೂಪದಲ್ಲಿ ಪ್ರಕಟವಾಗಿಲ್ಲವಷ್ಟೇ.ಅವುಗಳನ್ನು ಗುರುತಿಸುವ, ಅರ್ಥೈಸುವ, ಅನ್ವಯಿಸಿ ಹೇಳುವ ಪ್ರಯತ್ನವಾಗಬೇಕಷ್ಟೆ.ಹೇಗೆಂದರೆ ಭಾರತೀಯ ಸಾಹಿತ್ಯದಲ್ಲಿ ಪಾಶ್ಚಿಮಾತ್ಯರು ಹೇಳುವ ದುರಂತ ಪರಿಕಲ್ಪನೆ, ದುರಂತ ಚಿತ್ರಣಗಳು ಇಲ್ಲವೆಂಬ ಆರೋಪ ಆರಂಭದ ದಿನಗಳಲ್ಲಿ ಇದ್ದಿತು.ಆದರೆ ಬಿ.ಎಂ.ಶ್ರೀ ಅವರು ನಮ್ಮಲ್ಲಿಯು ಅಂತಹ ಸನ್ನಿವೇಶಗಳು ಸಾಕಷ್ಟಿವೆ ಎನ್ನುವುದನ್ನು ಪೌರಾಣಿಕ ಕಥೆಗಳಿಂದಲೇ ಕಟ್ಟಿಕೊಟ್ಟಿರುವುದನ್ನು ಮರೆಯಲಾಗದು.

ಅದರಂತೆ ಅಸ್ತಿತ್ವವಾದದ ಚಿಂತನೆಗಳು, ನಿಯಮಗಳು, ಧೋರಣೆಗಳು ಭಾರತೀಯ ಸಾಹಿತ್ಯದಲ್ಲೂ ವ್ಯಕ್ತವಾಗಿದೆ. ಅವುಗಳನ್ನು ಗುರುತಿಸಿ ಹೆಕ್ಕುವ, ಅರ್ಥೈಸಿ ಅನ್ವಯಿಸಿ ನಿರೂಪಿಸುವ ಕಾರ್ಯವಾಗಬೇಕಷ್ಟೇ ಅಲ್ಲದೆ 'ಅಸ್ತಿತ್ವವಾದ'ವನ್ನು ಕೇವಲ ವ್ಯಕ್ತಿ ಕೇಂದ್ರಿತವಾಗಿ ಬಿಂಬಿಸದೆ ಸಮಾಜದ, ಸಂಸ್ಕೃತಿಯ, ಧರ್ಮದ ಪ್ರತಿನಿಧಿಯೂ ಆತನೆ (ವ್ಯಕ್ತಿ) ಆಗಿರುವುದರಿಂದ ಸಮಾಜ, ಸಂಸ್ಕೃತಿ, ಧರ್ಮವೇ ಮೊದಲಾದ ವಿಷಯಗಳ ವಿಶಾಲಾರ್ಥದಲ್ಲಿಯೂ ಅಸ್ತಿತ್ವವಾದವನ್ನು ಪರಿಗಣಿಸಬಹುದಾಗಿದೆ.ನಿದರ್ಶನಾರ್ಥವಾಗಿ ಗಮನಿಸಿದಾಗ ಅಸ್ತಿತ್ವವಾದದ ಹಲವು ಚಿಂತನೆಗಳಲ್ಲಿ ದೇವರ ನಿರಾಕರಣೆ, ವ್ಯಕ್ತಿತ್ವದ ಅನಾವರಣವು ಒಂದು.ಈ ಅಂಶಗಳನ್ನು ಭಾರತೀಯ ಕೃತಿಗಳ ಹಿನ್ನೆಲೆಯಲ್ಲಿ ಹೀಗೆ ಪರಿಭಾವಿಸಬಹುದಾಗಿದೆ.

ದೇವರ ನಿರಾಕರಣೆ: ಶ್ರೀಕೃಷ್ಣ ಮಹಾಭಾರತದ ಪ್ರಧಾನ ಪಾತ್ರ ಮತ್ತು ಸೂತ್ರಧಾರ. ಈತನನ್ನು ವ್ಯಾಸರೇ ಮೊದಲ್ಗೊಂಡು ಭೀಷ್ಮ, ದ್ರೋಣಾದಿಗಳು ದೈವವಾಗಿ ಸ್ವೀಕರಿಸಿದರೆ, ಅದೇ ಕಾಲದಲ್ಲಿದ್ದ ಶಿಶುಪಾಲ, ದುರ್ಯೋಧನಾದಿಗಳು ಕೃಷ್ಣನನ್ನು ದೈವವಾಗಿ ಒಪ್ಪದೆ, ವ್ಯಕ್ತಿಯಾಗಿ ಸ್ವೀಕರಿಸುವ, ಕುತಂತ್ರಿ ಎಂದು ಜರಿಯುವ ಮತ್ತು ಹಿಂಸಿಸುವ ಸನ್ನಿವೇಶಗಳನ್ನು ಮಹಾಭಾರತದಲ್ಲಿ ಕಾಣುತ್ತೇವೆ.

ಅದೇ ರೀತಿ 'ವ್ಯಕ್ತಿತ್ವದ' ಅನಾವರಣವಾಗಿ ಗಮನಿಸಿದಾಗಲೂ ಸಹ ಕೃಷ್ಣನ ಮಗನಾದ ಜಾಂಬವತಿಯಿಂದ ಜನಿಸಿದ 'ಸಾಂಬನು' ಎಂದಿಗೂ ತಂದೆಯ ನಿಯಮಗಳನ್ನು ಒಪ್ಪಿಕೊಳ್ಳಲೇ ಇಲ್ಲ. ಆತನ ಪ್ರತಿಯೊಂದು ನಡೆಗಳನ್ನು ವಿರೋಧಿಸುತ್ತಲೇ ಬಂದ.ತನ್ನ ಅಸ್ಮಿತೆಯನ್ನು, ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದರಲ್ಲಿಯೆ ಜಾಗೃತನಾದ ಪರಿಣಾಮ ಸಾಂಬನ ಈ ನಿಲುವುಗಳು ದಾಯಾದಿ ಕಲಹಕ್ಕೆ ಕಾರಣವಾಗಿ ಯದುಕುಲ ಸರ್ವನಾಶವಾದದ್ದು ಇತಿಹಾಸ. 'ಅಸ್ತಿತ್ವದ' ಅತಿರೇಕತೆಗೆ ಇದೊಂದು ಉತ್ತಮ ವಿಷಯ.

ಕನ್ನಡ ಸಾಹಿತ್ಯದಲ್ಲಿಯೂ ಈ ಬಗೆ ಇವೆ. 'ಕಸವರಮೆಂಬುದು ನಱೆಸೈರಿಸಲಾರ್ಪೊಡೆ ಪದವಿಚಾರಮುಮಂ ಪರಧರ್ಮಮುಂ' ಎಂದು ಉದ್ದಕ್ಕೂ ಸಾರಿಕೊಂಡು ಬಂದಿರುವ ಜೈನಧರ್ಮ ತನ್ನ ಸಾಹಿತ್ಯ ಕೃತಿಗಳೆಲ್ಲದರಲ್ಲಿಯೂ ವೈದಿಕ ಧರ್ಮವನ್ನು ವಿರೋಧಿಸಿಕೊಂಡು ಬಂದಿರುವುದು ಒಂದರ್ಥದಲ್ಲಿ ಅಸ್ತಿತ್ವವಾದವೇ.ಹಾಗೆಯೇ ಆಧ್ಯಾತ್ಮಿಕ ಪುರುಷನೆನಿಸಿದ ರಾಮ, ಕೃಷ್ಣ, ಶಿವ ಮೊದಲಾದವರನ್ನು ಲೌಕಿಕ ವ್ಯಕ್ತಿಗಳಾಗಿ ಕಾಣುವ ನಿಲುವು ಕೂಡ ದೈವ ವಿರೋಧಿ ಅಂಶವೇ ಆಗಿವೆ. ಒಟ್ಟಾರೆ ಸಾಹಿತ್ಯದಲ್ಲಿ ಕಂಡುಬಂದಿರುವ ಇಂತಹ ಹಲವಾರು ಅಂಶಗಳನ್ನು ವ್ಯವಸ್ಥಿತ ಬಂಧದಲ್ಲಿ ಕಟ್ಟುವ ಕೆಲಸವಾಗಬೇಕಷ್ಟೆ.ಆಗ ಮಾತ್ರ ಅಸ್ತಿತ್ವವಾದದ ಪದ ಪರಿಕಲ್ಪನೆ ಆಧುನಿಕವೆನಿಸಿದರೂ ಅದರ ಆಶಯಗಳು ದೇಶಿಯವೂ ಆಗಿವೆ ಎಂಬ ನಿಲುವಿಗೆ ಬರಬಹುದು.

ಹೊಸಗನ್ನಡ ಕಾಲಘಟ್ಟದ ಆಲೋಚನೆಯನ್ನು ಮಾಡಿದರೆ ವ್ಯಕ್ತಿಯ ಏಕಾಂಗಿತನ, ಜೀವನದ ಅಸಂಗತತೆ, ಆಯ್ಕೆ, ಕರ್ತವ್ಯ ಈ ಎಲ್ಲ ವಿಚಾರಧಾರೆಗಳು ಮುಖ್ಯವಾಗಿ ನವ್ಯ ಸಾಹಿತ್ಯದಲ್ಲಿ ಕಂಡುಬರುತ್ತದೆ. ಎಂಬತ್ತರ ದಶಕದ ಕೊನೆಯಲ್ಲಿ ಅಡಿಗರ ಕಾವ್ಯದಲ್ಲಿ ಅಸ್ತಿತ್ವವಾದದ ಪ್ರಭಾವವನ್ನು ಕಾಣಬಹುದು.ಅಡಿಗರ ಭೂಮಿಗೀತದಲ್ಲಿ ಭೂಮಿ ಮತ್ತು ಆಕಾಶಗಳ ವಿವಿಧ ಸೆಳೆತಕ್ಕೊಳಗಾದ ಕಾವ್ಯಗಾಯಕ ತನ್ನ ಅಸ್ತಿತ್ವವನ್ನು ಅರಸುವುದನ್ನು ಕಾಣಬಹುದು.ಅಡಿಗರ ಚಂಡಮದ್ದಳೆಯಲ್ಲಿ ಕಾಣಬಹುದಾದ ಅಸ್ತಿತ್ವದ ಛಾಯೆ ಎ.ಕೆ.ರಾಮಾನುಜಂರವರ 'ಹೊಕ್ಕಳಲ್ಲಿ ಹೂವಿಲ್ಲ' ಕವನದಲ್ಲೂ ಕಾಣಬಹುದು.ಯು.ಆರ್. ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯಲ್ಲಿ ಪ್ರಾಣೇಶರಾಯರು ಚಂದ್ರಿಯನ್ನು ಕೂಡಿದ ಬಳಿಕ ಕೇಳುವ ಪ್ರಶ್ನೆಗಳು ಅವರ ಅಸ್ತಿತ್ವವನ್ನು ತಿಳಿಸುತ್ತವೆ.

ಕನ್ನಡದಲ್ಲಿ ಅಸಂಗತ ನಾಟಕಗಳು ಸುಮತೀಂದ್ರ ನಾಡಿಗರಿಂದ ಆರಂಭವಾಯಿತು.60ರ ದಶಕದ ಕೊನೆಯಲ್ಲಿ ಕಂಬಾರ, ಕಾರ್ನಾಡ್ ಜಾನಪದ ಶೈಲಿಯಲ್ಲಿ ನಾಟಕಗಳನ್ನು ರಚಿಸುತ್ತಿದ್ದರು.ಪ್ರೊ.ಎನ್. ರತ್ನ, ಪಿ.ಲಂಕೇಶ್, ಚಂದ್ರಶೇಖರ ಪಾಟೀಲ್, ಚಂದ್ರಕಾಂತ ಕುಸನೂರ ಇವರು ವಿಭಿನ್ನ ಧೋರಣೆಯ ಹೊಸದಾದ ನಾಟಕ ರಚಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕಾದಂಬರಿಕಾರರಲ್ಲಿ ಪ್ರಮುಖರು ಬೇಂದ್ರೆ, ಶ್ರೀರಂಗ, ಪುಟ್ಟಣ್ಣ

ಅವರ ಈಶ್ವರನೂ ನಕ್ಕಿರಬೇಕು, ಗೋಕಾಕರ ವಿಮರ್ಶಕ ವೈದ್ಯ, ಕಾರಂತರ ದೇವದೂತರು, ಮಾಸ್ತಿಯವರ ಶಾಂತಾ, ನಾ ಕಸ್ತೂರಿ ಎಸ್ಸಿಯವರು, ದ.ರಾ.ಬೇಂದ್ರೆಯವರ ಉದ್ಧಾರ, ಸಾಯೋ ಆಟ, ನಗೆಯ ಹೊಗೆ, ತಿರುಕನ ಪಿಡುಗು ಇವುಗಳನ್ನು ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಮುಖ್ಯವಾಗಿ ಹೆಸರಿಸಬಹುದು.

ಕುಸುಮಾಕರ ದೇವರಗಣ್ಣೂರ ಅವರ 'ನಾಲ್ಕನೆಯ ಆಯಾಮ' ಕಾದಂಬರಿ 1966ರಲ್ಲಿ ಪ್ರಕಟಿಸಲ್ಪಟ್ಟಿದ್ದು, ಕನ್ನಡದ ಮೊದಲನೆಯ ನವ್ಯ ಕಾದಂಬರಿ. ನವ್ಯ ಸಾಹಿತ್ಯದ ಮೇಲೆ ಗಾಢ ಪ್ರಭಾವ ಬೀರಿದ್ದ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ರೂಪುಗೊಂಡ ಹಾಗಿದೆ. ಈ ಕಾದಂಬರಿಯ ಕಥಾನಾಯಕನಿಗೆ ಹೆಸರೇ ಇಲ್ಲ. ಈತ ನಮ್ಮ ಯುವ ಸಮುದಾಯದ ನಡುವಿನ ಯಾರೊಬ್ಬನು ಆಗಿರಬಹುದಾಗಿದ್ದು ತನ್ನ ಅಸ್ತಿತ್ವಕ್ಕೆ ತಾನೇ ಜವಬ್ದಾರ ಎಂಬ ನಿಲುವಿಗೆ ಬರುತ್ತಾನೆ. ಇದು ನವ್ಯ ಸಾಹಿತ್ಯದ ಹಣೆಪಟ್ಟಿಯಲ್ಲಿ ರೂಪುಗೊಂಡ ಮನೋ ವಿಶ್ಲೇಷಣಾತ್ಮಕ ಕಾದಂಬರಿಯಾಗಿದ್ದರೂ ಇದು ಎತ್ತುವ ಪ್ರಶ್ನೆಗಳು ಈ ಕಾಲಕ್ಕೂ ಪ್ರಸ್ತುತ ಮತ್ತು ಸರ್ವಕಾಲಿಕ.

ಕನ್ನಡ ಸಾಹಿತ್ಯದ ಮೇಲೆ ಅಸ್ತಿತ್ವವಾದದ ಚಿಂತನೆಗಳ ಪ್ರಭಾವ ದಟ್ಟವಾಗಿಯೆ ಆಗಿದೆ.ಶಿವರಾಮಕಾರಂತರ 'ನಂಬದವರ ನಾಕ ನರಕ' ಕಾದಂಬರಿ ಮೊದಲ ಬಾರಿಗೆ ಅಸ್ತಿತ್ವವಾದಿ ಪ್ರಜ್ಞೆಯನ್ನು ಚಿತ್ರಿಸಿದೆ. ಎ.ಕೆ. ರಾಮಾನುಜನ್ ಅವರ 'ಹಳದಿ ಮೀನು' ಕಾದಂಬರಿಯು 'ಅವನು' ಮಾದರಿಯ ಬುದ್ಧಿಜೀವಿ ಎಂಬ ಹೇಳಿಕೆಯನ್ನು ಬಿಟ್ಟರೆ, ಸಂಸ್ಕಾರ, ಭಾರತೀಪುರ, ಹಳದಿಮೀನು, ಗತಿಸ್ಥಿತಿ ಮುಂತಾದ ಕಾದಂಬರಿಗಳಲ್ಲಿ ಸುಳಿಯುವ ಅಸ್ತಿತ್ವವಾದದ ಛಾಯೆಗಳನ್ನು ಪ್ರಾಸಂಗಿಕವಾಗಿ ಗುರುತಿಸುವುದನ್ನು ಬಿಟ್ಟರೆ ನವ್ಯ ಸಾಹಿತ್ಯದ ಮೇಲೆ ಅಸ್ತಿತ್ವವಾದದ ಪ್ರಭಾವವನ್ನು ಕುರಿತ ಹಾಗೆ ಸಮಗ್ರ ಅಧ್ಯಯನವಾಗಬೇಕಿದೆ.

ಮನುಷ್ಯನ ಭಾವ ವಸ್ತು ಪ್ರಪಂಚವನ್ನು ಪೂರ್ತಿಯಾಗಿ ವಿವರಿಸಲಾರದು.ಸಾಹಿತ್ಯವು ಮನುಷ್ಯ ಜೀವನವನ್ನು ಪೂರ್ತಿಯಾಗಿ ವಿವರಿಸಲಾರದು.ತತ್ವಜ್ಞಾನವು ಪೂರ್ತಿಯಾಗಿ ಲೋಕವನ್ನು ಗ್ರಹಿಸಲಾರದು, ಸಾಹಿತ್ಯ ಮತ್ತು ತತ್ವಜ್ಞಾನ ಭಾಷೆಯನ್ನು ಆಶ್ರಯಿಸುತ್ತಾ ಭಾಷೆಯ ಪರಿಮಿತಿಗೆ ಒಳಗಾಗ ಬೇಕಾಗುತ್ತದೆ.ಭಾಷೆ–ಸಾಹಿತ್ಯ–ಮನುಷ್ಯ ಇವೆಲ್ಲದ್ದಕ್ಕೂ ಮಿಕ್ಕಿದ್ದು ಲೋಕ.ಮನುಷ್ಯಾವತಾರಕ್ಕು ಮೊದಲು ಲೋಕವಿತ್ತು.ಪರಿನಿರ್ವಾಣದ ನಂತರವೂ ಇದು ಇರುತ್ತದೆ.ಮನುಷ್ಯ ವರ್ಗದ ಕಾಲಾವಧಿ ಲೋಕದ ಅನಂತತೆಯನ್ನು ವ್ಯಾಪಿಸುವುದಿಲ್ಲ. ಇದನ್ನು ತಿಳಿಯುವುದಕ್ಕೆ ರಾತ್ರಿಯ ಆಕಾಶದಲ್ಲಿ ಬೆಳಗುವ ಚಂದ್ರ ನಕ್ಷತ್ರಗಳನ್ನು ನೋಡಿದರೆ ಸಾಕು.

**ಪರಾಮರ್ಶನ ಕೃತಿಗಳು**


1. ಅಸ್ತಿತ್ವವಾದ – ಕೆ.ವಿ. ತಿರುಮಲೇಶ್, ಅಭಿನವ, ಬೆಂಗಳೂರು, 2020
2. ಅಸ್ತಿತ್ವವಾದ – ವಿಕಿಪೀಡಿಯ
3. ಅಸ್ತಿತ್ವವಾದದ ವ್ಯಾಖ್ಯಾನಗಳು – ಅಷ್ಪೊವರ್ಡ್ ಲೇಖನಗಳು
4. ಅಸ್ತಿತ್ವವಾದದ ನೆರಳು – ಓ.ಎಲ್. ನಾಗಭೂಷಣಸ್ವಾಮಿ
5. ಅಪೂರ್ಣವರ್ತಮಾನಕಾಲ – ಜನಪ್ರಿಯ ಪುಸ್ತಕಮಾಲೆ– ಕನ್ನಡದಲ್ಲಿ ಅಸ್ತಿತ್ವವಾದ ಸಾಹಿತ್ಯ
6. ವಿಮರ್ಶೆಯ ಪರಿಭಾಷೆ – ಓ.ಎಲ್. ನಾಗಭೂಷಣಸ್ವಾಮಿ